III ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪುರಸಭೆಗಳನ್ನು ಮಂಡಲ್ ಪಂಚಾಯ್ತಿಗಳನ್ನಾಗಿ ಪರಿವರ್ತಿಸಿ ಚುನಾವಣೆ ನಡೆಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಇದ್ದ ಪುರಸಭೆಗಳನ್ನು ರದ್ದುಪಡಿಸಿ ಮಂಡಲ ಪಂಚಾಯತ್‌ಗಳನ್ನಾಗಿ ಘೋಷಿಸಲಾಗಿದೆ. ಸುಳ್ಯ ತಾಲ್ಲೂಕಿನಲ್ಲಿ ಬಂಟವಾಳ, ಪುತ್ತೂರು ತಾಲ್ಲೂಕಿನ ಬೆಳ್ತಂಗಡಿ ತಾಲ್ಲೂಕಿನಲ್ಲಿ ಈ ಪುರಸಭೆಗಳನ್ನು ಮಂಡಲ ಪಂಚಾಯತ್ ಘೋಷಿಸಿದ ನಂತರ ಇವುಗಳಿಗೆ ಮಂಡಲ್ ಪಂಚಾಯತ್ ಚುನಾವಣೆಯನ್ನು ಮಾಡದಿರಲು ಕಾರಣ ವೇನು ? ಈ ಹಿಂದೆ ಇದ್ದ ಪುರಸಭಾ ಸದಸ್ಯರನ್ನು ಖಾಯಂಗೊಳಿಸುವುದು ಸರಿಯೇ ? ಆದೇ ಸದಸ್ಯರು ಶಾಶ್ವತವೇ ? ಅವರನ್ನು ಖಾಯಂಗೊಳಿಸುವುದರಲ್ಲಿ ಅರ್ಥವಿಲ್ಲ. ಇದರಿಂದ ಪೌರತ್ವದ ಹಕ್ಕನ್ನು ಮೊಟಕುಗೊಳಿಸುವಂತಾಗಿದೆ ಆದುದರಿಂದ ಮಂಡಲ್ ಪಂಚಾಯತ್, ಜಿಲ್ಲಾಪರಿಷತ್ ಚುನಾವಣೆಯ ಕಾಲದಲ್ಲೇ ಆ ಪುರಸಭೆಗಳ ಕ್ಷೇತ್ರಗಳ ಮಂಡಲಿಗಳಿಗೂ ಚುನಾವಣೆ ನಡೆಸುವಂತಾಗಬೇಕು ಮತ್ತು ಮಂಡಲ್ ಪಂಚಾಯತ್ ಚುನಾವಣೆ ಸಮಿಪಿಸಿದರೂ ಸಾಮಾನ್ಯ ಸ್ಥಾನಗಳು ಮಹಿಳಾ ಸ್ಥಾನ ಗಳು ಪರಿಶಿಷ್ಟ ಜಾತಿ ಪಂಗಡಗಳ ಸ್ಥಾನಗಳಿಗೆ ಎಲ್ಲಿಂದ ಎಲ್ಲಿವರೆಗಿನ ಕ್ಷೇತ್ರಗಳ ಪರಿಮಿತಿ ಎಂದು ತಿಳಿದು ಬಂದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೇ, ನಮ್ಮ ಜಿಲ್ಲಾಪರಿಷತ್ ಶಾಸನದ ಪ್ರಕಾರ ೧೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಎಲ್ಲಾ ಪುರಸಭೆಗಳೂ ಮಂಡಲ್ ಪಂಚಾಯ್ತಿಗಳಾಗಿ ಪರಿವರ್ತಿತವಾಗಿವೆ. ಆದೇ ರೀತಿ ಇವರ ಸುಳ್ಯ ತಾಲ್ಲೂಕಿನಲ್ಲೂ ಎರಡು ಮೂರು ಇವೆ, ಆದರೆ ಮಾನ್ಯ ಸದಸ್ಯರ ಅಭಿಪ್ರಾಯ ಏನೆಂದರೆ ಅವುಗಳಿಗೆಲ್ಲ ಚುನಾವಣೆ ಮಾಡಿ ಎಂಬುದು. ಅವೆಲ್ಲಾ ಈ ಶಾಸನದ ರೀತ್ಯಾದ ಪುರಸಭೆಗಳು. ಈ ಹಿಂದೆ ಪುರಸಭೆಗಳಿಗೆ ರಾಜ್ಯಾದ್ಯಂತ ನಡೆದ ಚುನಾವಣೆಗಳಲ್ಲಿ ಇಲ್ಲೂ ಚುನಾವಣೆಗಳಾಗಿವೆ, ಇನ್ನೂ ಇವರಿಗೆ ಉಳಿದುಕೊಂಡಿರುವ ಕಾಲಾವಧಿಗೆ ಅವರನ್ನು ಪ್ರಮುಖ, ಉಪಪ್ರಮುಖ ಹಾಗೂ ಉಪ ಪ್ರಧಾನರನ್ನಾಗಿ ಮುಂದುವರಿಸಲು ಶಾಸನದಲ್ಲಿ ಅವಕಾಶ ಇದೆ. ಇವರ ಕಾಲ ಇನ್ನೂ ಎರಡು ವರ್ಷ ಮಾತ್ರ. ಆ ಕಾಲ ಮುಗಿದ ನಂತರ ಚುನಾವಣೆಯನ್ನೂ ಅಲ್ಲಿ ನಡೆಸುತ್ತೇವೆ. ಮತ್ತು ಇನ್ನೊಂದು ಅವರಿಗಿರುವ ಅನುಮಾನ ಎಂದರೆ ಗಡಿ ವಿಂಗಡಣೆ ಆಗಿಲ್ಲ ಎಂಬುದು ನನಗೆ ಗೊತ್ತಿರುವ ಪ್ರಕಾರ ಎಲ್ಲಾ ಗಡಿಗಳ ವಿಂಗಡಣೆಯೂ ಈಗಾಗಲೇ ಮುಗಿದಿದೆ ಅದು ಗೆಜೆಟ್‌ನಲ್ಲೂ ಪ್ರಕಟವಾಗಿವೆ. ಮಾನ್ಯ ಸದಸ್ಯರಿಗೆ ಪ್ರಕಟವಾದ ಕಾಪಿಯನ್ನು ಕಳುಹಿಸಿಕೊಡುತ್ತೇನೆ.

೧-೦೦ ಪಿ. ಎಂ.

IV ರಾಜ್ಯದಲ್ಲಿ ವೈದ್ಯಾಪ್ಯ ವೇತನ ಹೆರಿಗೆ ಭತ್ಯ ವಿಧವಾ ವೇತನ ಫಲಾನುಭವಿಗಳಿಗೆ ದೊರಕದಿರುವುದು

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡಮಾಡಲ್ಪಟ್ಟಿರುವ ಮಾನವತಾ ಕೊಡಿಗೆಗಳಾದ ವೈದ್ಯಾಪ್ಯವೇತನ, ಅಂಗವಿಕಲತ ವೇತನ, ವಿಧವಾ ವೇತನ, ಹೆರಿಗೆ ಭತ್ಯೆ ಇತ್ಯಾದಿಗಳ ಹಣವು ಪ್ರತಿ ಮಾಹೆ ಫಲಾನುಭವಿಗಳಿಗೆ ದೊರಕದೆ ಅವರ ಬಾಳು ದುರಂತಕ್ಕೆ ಸಿಕ್ಕಿದೆ. ಇತ್ತ ಬೇಡಲೂ ಸರ್ಕಾರದ ನೆರವಿದೆಯೆಂತಲೂ, ಅತ್ತ ದುಡಿದುಣ್ಣುವ ಶಕ್ತಿ ಕುಂದಿರುವುದರಿಂದ ಇವರ ಬಾಳು ಗೋಳಾಗಿದೆ. ಹಿರಿಯೂರು ತಾಲ್ಲೂಕಿನಲ್ಲಂತೂ ಈ ಹಣದ ನಿಲುಗಡೆ ಬಹಳವಾಗಿದೆ. ನಿಂತ ಹಣ ಪಡೆಯಲು ಲಂಚ ನೀಡಬೇಕಾಗಿದೆ. ಈ ಲಂಚದ ಹಣವನ್ನು ಸಂಬಂಧಿಸಿದ ನೌಕರ ಮತ್ತು ಖಜಾಂಚಿ ಅಧಿಕಾರಿಗಳು ಯಾರ ಭಯವಿಲ್ಲದೆ ಪಡೆದೆ ಕಳುಹಿಸುತ್ತಿರುವುದು. ಇದರಿಂದ ಬೇಸತ್ತ ಜನಕ್ಕೆ ದಾರಿ ತೋಚದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಹಣ ನಿಲ್ಲದಂತೆಯೂ ಮತ್ತು ಕೈಸೇರುವಂತೆ ಸಂಪೂರ್ಣ ತಂತ್ರವನ್ನು ಬಳಸಲು ನೇರವಾಗಿ ಯತ್ನಿಸಬೇಕಾಗಿದೆ. ಹಿರಿಯೂರು ತಾಲ್ಲೂಕಿನಲ್ಲಿ ವಿವಿಧ ವೇತನಗಳ ಅಡಿಯಲ್ಲಿ ನಿಂತಿರುವ ಹಣವೆಷ್ಟು ? ವಿಳಂಬಕ್ಕೆ ಕಾರಣವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ವೈದ್ಯಾಪ್ಯವೇತನ, ಅಂಗವಿಕಲ ವೇತನ, ವಿಧವಾ ವೇತನ, ಹೆರಿಗೆಭತ್ಯೆ ಇವುಗಳನ್ನು ಪಡೆಯುತ್ತಿರುವ ಅರ್ಹ ಕುಟುಂಬಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಹಿರಿಯೂರು ತಾಲ್ಲೂಕಿನಲ್ಲಿ ಏನು ಅವ್ಯವಹಾರ ಮತ್ತು ವಿಳಂಬ ವಾಗುತ್ತಿದೆಯೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.